ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ:director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

**ಸಂಖ್ಯೆ: ಕವಿಪ್ರನಿನಿ/ಬಿ85/6334/2014-15** **ದಿನಾಂಕ: 18 JUN 2021**

**ಲಗತ್ತು: 3**

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.),
ಬೆವಿಕಂ/ಹುವಿಸಕಂ/ಮವಿಸಕಂ/ಗುವಿಸಕಂ/ಚಾವಿಸನಿನಿ,
ಬೆಂಗಳೂರು/ಹುಬ್ಬಳ್ಳಿ/ಮಂಗಳೂರು/ಕಲಬುರಗಿ/ಮೈಸೂರು.

**"ಅತೀ ತುರ್ತು"**

ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ತುಮಕೂರು/ಮೈಸೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮುಖ್ಯ ಇಂಜಿನಿಯರ್(ವಿ), ಎಸ್.ಎಲ್.ಡಿ.ಸಿ,
ಕವಿಪ್ರನಿನಿ, ಬೆಂಗಳೂರು.

ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ),
ಕವಿಪ್ರನಿನಿ, ಬೆಂಗಳೂರು.

ಮಾನ್ಯರೇ,

**ವಿಷಯ:** ಕವಿಪ್ರನಿನಿಯ ಜಾಲತಾಣದಲ್ಲಿ **"ಕವಿಪ್ರನಿನಿ ಹಾಗೂ ವಿಸಕಂಗಳ ಹುದ್ದೆ ಮತ್ತು ಸಿಬ್ಬಂದಿಗಳ ದತ್ತಾಂಶ"**ವನ್ನು ದಿನಾಂಕ: 31.03.2021 ರಂದು ಇರುವಂತೆ ಇಂದೀಕರಿಸುವ ಬಗ್ಗೆ.

**ಉಲ್ಲೇಖ:**
1. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ5ಎ/18261 /2015-16 ದಿನಾಂಕ: 01.06.2021
2. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ5ಎ/18261 /2015-16 ದಿನಾಂಕ: 23.03.2021

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಕವಿಪ್ರನಿನಿ ಮತ್ತು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯವ್ಯಾಪ್ತಿಯ ಕಛೇರಿಗಳ ಹುದ್ದೆ ಹಾಗೂ ಸಿಬ್ಬಂದಿಗಳ ಮಾಹಿತಿಗಳನ್ನು ಪಡೆಯಲು ಹಾಗೂ ಸರ್ಕಾರ/ಶಾಸಕಾಂಗ ಸಭೆ/ಮಂಡಳಿಗೆ ವರದಿಗಳನ್ನು ಒದಗಿಸಲು ಆನ್‌ಲೈನ್ ದತ್ತಾಂಶವನ್ನು ರಚಿಸಲಾಗಿದೆ.

ಮುಂದುವರೆದು, ಪ್ರತೀ ವರ್ಷದಂತೆ ಪ್ರಸ್ತುತ ಆರ್ಥಿಕ ವರ್ಷದಲ್ಲಿಯೂ ದಿನಾಂಕ: 31.03.2021 ರಂತೆ **"ಕವಿಪ್ರನಿನಿ ಮತ್ತು ಎಸ್ಕಾಂಗಳ ಹುದ್ದೆ ಹಾಗೂ ಸಿಬ್ಬಂದಿಗಳ ದತ್ತಾಂಶ"**ದಲ್ಲಿ ಈಗಾಗಲೇ ನೀಡಲಾಗಿರುವ ಪಾಸ್‌ವರ್ಡ್‌ನೊಂದಿಗೆ ಸದರಿ ಮಾಹಿತಿಗಳನ್ನು **ದಿನಾಂಕ: 30.06.2021 ರ ಒಳಗೆ ತಪ್ಪದೇ ನವೀಕರಿಸಿ** ದಾಖಲಿಸಲು ಕೋರಿದೆ.

ಉಲ್ಲೇಖ (2) ರ ಪತ್ರದಲ್ಲಿ ತಿಳಿಸಿರುವಂತೆ, ಕವಿಪ್ರನಿನಿಯು ಪ್ರತೀ ವರ್ಷಾಂತ್ಯಕ್ಕೆ ಅಧಿಸೂಚನೆಯ ಮೂಲಕ ಪ್ರಕಟಿಸುತ್ತಿರುವ ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆಗಳು ಮತ್ತು ಸಿಬ್ಬಂದಿಯ ದತ್ತಾಂಶದಲ್ಲಿ ಕವಿಪ್ರನಿನಿ ಮತ್ತು ವೇತನ ಬಟವಾಡೆ ಅಧಿಕಾರಿಗಳು ದಾಖಲಿಸುತ್ತಿರುವ ಹುದ್ದೆಗಳ ಮಾಹಿತಿಗಳು/ ಸಂಖ್ಯೆಗಳು

ಹೊಂದಾಣಿಕೆಯಾಗುತ್ತಿರುವುದಿಲ್ಲವಾದ್ದರಿಂದ, ಸಿಬ್ಬಂದಿಯ ದತ್ತಾಂಶದಿಂದ ಹುದ್ದೆಗಳ ಮತ್ತು ಸಿಬ್ಬಂದಿಯ ವಿವಿಧ ಮಾಹಿತಿಗಳನ್ನು ಪಡೆದು ಸರ್ಕಾರದ ವಿವಿಧ ಇಲಾಖೆಗಳಿಗೆ, ಆಯೋಗಗಳಿಗೆ, ಸಭೆಗಳಿಗೆ, ವಿಧಾನ ಮಂಡಲದ ಸದಸ್ಯರಿಗೆ ಮತ್ತು ಇತರೆ ಪ್ರಾಧಿಕಾರಗಳಿಗೆ ಸಲ್ಲಿಸುವಾಗ ಕಷ್ಟಕರವಾಗಿರುತ್ತದೆ. ಆದ್ದರಿಂದ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವ ಹುದ್ದೆಗಳ ಮಾಹಿತಿಗಳು/ಅಂಕಿ ಅಂಶಗಳು(ಉಲ್ಲೇಖ-1 ರಲ್ಲಿ ಕೋರಿರುವಂತೆ) ಹಾಗೂ ಸಿಬ್ಬಂದಿಯ ದತ್ತಾಂಶದಲ್ಲಿ ಸಂಬಂಧಿಸಿದ ಬಟವಾಡೆ ಅಧಿಕಾರಿಗಳು ನಮೂದಿಸುತ್ತಿರುವ ಮಾಹಿತಿಗಳು/ಅಂಕಿ ಅಂಶಗಳು ಒಂದೇ ಆಗಿರುವಂತೆ ಹಾಗೂ ಹೊಂದಾಣಿಕೆಯಾಗುವಂತೆ ನಿಗಾ ವಹಿಸಲು ಮತ್ತೊಮ್ಮೆ ಕೋರಿದೆ.

ಪಾಸ್‌ವರ್ಡ್ ಸಂಬಂಧಿತ ಹಾಗೂ ದತ್ತಾಂಶದಲ್ಲಿ ಮಾಹಿತಿಯನ್ನು ನಮೂದಿಸುವ ತೊಂದರೆಗಳಿಗೆ ಸಂಬಂಧಿಸಿದ ಯಾವುದೇ ಸಂದೇಹ/ ಸ್ಪಷ್ಟೀಕರಣದ ವಿಷಯವಾಗಿ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳು ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ manager.ar.kptcl@gmail.com ಗೆ ಮಿಂಚಂಚೆ ಮೂಲಕ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಉಲ್ಲೇಖಿತ ದತ್ತಾಂಶದಲ್ಲಿ ಮಾಹಿತಿಯನ್ನು ಭರ್ತಿ ಮಾಡಲು ಸೂಚನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ.

ತಮ್ಮ ವಿಶ್ವಾಸಿ,

18/6/14

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿಗಳನ್ನು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ:

1. ವ್ಯವಸ್ಥಾಪಕ ನಿರ್ದೇಶಕರು, ವಿಸಕಂಗಳು/ಪಿಸಿಕೆಎಲ್
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ವಿಸಕಂಗಳು, ಬೆಂಗಳೂರು
3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ವಿಸಕಂಗಳು.
4. ನಿರ್ದೇಶಕರು(ಹಣಕಾಸು)/(ಪ್ರಸರಣ)/(ಆ ಮತ್ತು ಮಾ.ಸಂ), ಕವಿಪ್ರನಿನಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು
5. ಅಧೀಕ್ಷಕ ಇಂಜಿನಿಯರ್(ವಿ), ಐ.ಟಿ & ಎಮ್.ಐ.ಎಸ್, ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
6. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು.
7. ಉಪ ಲೆಕ್ಕ ನಿಯಂತ್ರಣಾಧಿಕಾರಿ(ಐ.ಟಿ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು.
9. ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ/ವಿಸಕಂಗಳು.

ಸಂಖ್ಯೆ: ಕವಿಪ್ರನಿನಿ/ಬಿ85/6334/2014-15

ಅನುಬಂಧ

## ಸೂಚನೆಗಳು

1. ಕವಿಪ್ರನಿನಿಯ ಜಾಲತಾಣ https://kptcl.karnataka.gov.in=>eprasarana ದಲ್ಲಿ ಮಾಹಿತಿಗಳನ್ನು ಇಂದೀಕರಿಸಲು ಸೂಚಿಸಿದೆ.
2. ಸಂಬಂಧಿಸಿದ ಸಂಬಳ ಬಟವಾಡೆ ಅಧಿಕಾರಿಗಳ ಹೆಸರು, ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಸರಿಯಾಗಿ ನಮೂದಿಸತಕ್ಕದ್ದು.
3. ಪ್ರತೀ ನೌಕರರ ಮೂಲ ವೇತನವನ್ನು ದಿನಾಂಕ: 31.03.2021 ರಂತೆ ನಮೂದಿಸಬೇಕು.
4. ಪ್ರತಿಯೊಬ್ಬ ನೌಕರನ ನೇಮಕಾತಿ ಪ್ರಾಧಿಕಾರವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಉದಾಹರಣೆಗೆ,

   ಅ. ಪವರ್‌ಮ್ಯಾನ್- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಮವಿಸಕಂ, ಉಡುಪಿ.

   ಆ. ಕಿರಿಯ ಸಹಾಯಕ- ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂ, ಬೆಳಗಾವಿ.

   ಇ. ಕಿರಿಯ ಇಂಜಿನಿಯರ್(ವಿ)-ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಗುವಿಸಕಂ, ರಾಯಚೂರು.

   ಈ. ಕಾರ್ಯನಿರ್ವಾಹಕ ಇಂಜಿನಿಯರ್(ವಿ)- ನಿರ್ದೇಶಕರು(ಆಡಳಿತ ಮತ್ತು ಮಾ.ಸಂ), ಕವಿಪ್ರನಿನಿ, ಬೆಂಗಳೂರು.
5. ಪ್ರತಿಯೊಬ್ಬ ನೌಕರನ ಪ್ಯಾನ್ ಹಾಗೂ ಆಧಾರ್ ಸಂಖ್ಯೆಯನ್ನು ಪಡೆದು ನಮೂದಿಸಬೇಕು.
6. ಪ್ರತಿಯೊಬ್ಬ ನೌಕರನ ವರ್ಗ, ಜಾತಿ, ಉಪಜಾತಿ ಹಾಗೂ ಧರ್ಮದ ಮಾಹಿತಿಯನ್ನು ಸರಿಯಾಗಿ ನಮೂದಿಸಬೇಕು.
7. ನೌಕರರನ್ನು ಕಂಪನಿಗಳು ನೇಮಿಸಿದ್ದಲ್ಲಿ, ನೌಕರನು ಕವಿಪ್ರನಿನಿ, ಬೆವಿಕಂ, ಮವಿಸಕಂ, ಹುವಿಸಕಂ, ಗುವಿಸಕಂ ಅಥವಾ ಚಾವಿಸನಿನಿ ನೌಕರನೆಂದು ಸ್ಪಷ್ಟವಾಗಿ ನಮೂದಿಸಬೇಕು.
8. ನೌಕರನನ್ನು ನೇರ ನೇಮಕಾತಿ ಅಡಿಯಲ್ಲಿ ನೇಮಕ ಮಾಡಲಾಗಿದ್ದಲ್ಲಿ, ನೌಕರನನ್ನು ಹೈದರಾಬಾದ್ ಕರ್ನಾಟಕ ಮಿಸಲಾತಿಯಡಿಯಲ್ಲಿ ನೇಮಕ ಮಾಡಲಾಗಿದೆಯೇ ಎಂದು ನಮೂದಿಸತಕ್ಕದ್ದು.
9. ಎಲ್ಲಾ ನೌಕರರಿಗೆ ಸಂಬಂಧಿಸಿದಂತೆ, ನೌಕರರು ಹೈ-ಕ ಪ್ರದೇಶಕ್ಕೆ ಸೇರಿದವರಾಗಿದ್ದಾರೆಯೇ ಮತ್ತು ಸೇವಾ ದಾಖಲೆಯ ಪ್ರಕಾರ ಸ್ಥಳೀಯ ವ್ಯಕ್ತಿ ಎಂದು ಪ್ರಮಾಣಿಕರಿಸಲಾಗಿದೆಯೇ? ಅಥವಾ ಸಹಾಯಕ ಆಯುಕ್ತರಿಂದ ಅರ್ಹತಾ ಪ್ರಮಾಣ ಪತ್ರವನ್ನು ಪಡೆಯಲಾಗಿದೆಯೇ? ಎಂದು ಸ್ಪಷ್ಟವಾಗಿ ಸೂಚಿಸತಕ್ಕದ್ದು.
10. ಎಲ್ಲಾ ನೌಕರರ ವಿವರಗಳನ್ನು ನಮೂದಿಸಿ, ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಯು ಈ ವಿವರಗಳನ್ನು ಮುದ್ರಿಸಿ ವೇತನ ವಿತರಣಾ ಕಛೇರಿಯಲ್ಲಿಯೇ ಉಳಿಸಿಕೊಳ್ಳತಕ್ಕದ್ದು.
11. ಒಂದು **Data entry completion report** ಅನ್ನು ದತ್ತಾಂಶದಲ್ಲಿ ಸೃಜಿಸಿ ಇದನ್ನು ಸಹ ಮುಂದಿನ ದಾಖಲೆಗಾಗಿ ಕಛೇರಿಯಲ್ಲಿಯೇ ಉಳಿಸಿಕೊಳ್ಳತಕ್ಕದ್ದು. ಮುಂದುವರೆದು, **Data entry completion report** ನ ಮೆದು ಪ್ರತಿಯನ್ನು manager.ar.kptcl@gmail.com ಗೆ ಕಳುಹಿಸತಕ್ಕದ್ದು.

***

0/c

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**
**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ:** ಕವಿಪ್ರನಿನಿ/ಬಿ೭ಎ/18261/2015-16/1

**ದಿನಾಂಕ:** 12 3 MAR 2021

2 3 MAR 2020
..................ರಂದು ರವಾನಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.),
ಬೆವಿಸಕಂ/ಮವಿಸಕಂ/ಹುವಿ.ಸ.ಕಂ./ಗುವಿಸಕಂ/ಚಾ.ವಿ.ಸ.ನಿ.ನಿ.,
ಬೆಂಗಳೂರು/ಮಂಗಳೂರು/ಹುಬ್ಬಳ್ಳಿ/ಕಲಬುರಗಿ/ಮೈಸೂರು.

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ಮೈಸೂರು/ತುಮಕೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮುಖ್ಯ ಇಂಜಿನಿಯರ್(ವಿ),
ಎಸ್.ಎಲ್.ಡಿ.ಸಿ., ಕವಿಪ್ರನಿನಿ,
ಬೆಂಗಳೂರು.

ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ),
ಕವಿಪ್ರನಿನಿ, ಕಾವೇರಿ ಭವನ,
ಬೆಂಗಳೂರು.

ಮಾನ್ಯರೆ,

**ವಿಷಯ:** ಕವಿಪ್ರನಿನಿ ಮತ್ತು ವಿ.ಸ.ಕಂ.ಗಳಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳ ಬಗ್ಗೆ.
**ಉಲ್ಲೇಖ:** ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ೭ಎ/18261/2015-16 ದಿನಾಂಕ: 21.09.2020.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತೀ ವರ್ಷದಂತೆ ಈ ವರ್ಷವೂ ಸಹ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ **ದಿನಾಂಕ:31.03.2021 ರವರೆಗೆ** ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಕವಿಪ್ರನಿನಿಯು ತುರ್ತಾಗಿ ಪ್ರಕಟಿಸಬೇಕಿದ್ದು, ಪ್ರತೀ ವರ್ಷವೂ ನಿಮ್ಮ ಕಛೇರಿಯು ಸಲ್ಲಿಸುತ್ತಿರುವಂತೆ ನಿಮ್ಮ ವಿದ್ಯುತ್ ಸರಬರಾಜು ಕಂಪನಿಯ/ಕವಿಪ್ರನಿನಿ ಪ್ರಸರಣ ವಲಯದ/ನಿಮ್ಮ ಕಾರ್ಯವ್ಯಾಪ್ತಿಯ ಕಛೇರಿಗಳಲ್ಲಿ **ದಿನಾಂಕ: 31.03.2021 ರವರೆಗೆ** ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಆರ್ಥಿಕ ವರ್ಷವು ಅಂತ್ಯವಾಗುತ್ತಿದ್ದಂತೆ ವಿಳಂಬ ಮಾಡದೇ, ಉಲ್ಲೇಖದ ನಿಗಮದ ಅಧಿಸೂಚನೆಯ ನಮೂನೆಯಲ್ಲಿ (ಕವಿಪ್ರನಿನಿಯ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆ) ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಕೋರಿದೆ.

ಮುಂದುವರೆದು ತಿಳಿಸುತ್ತಾ, ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಿವಿಧ ಕಛೇರಿಗಳು ಆರ್ಥಿಕ ವರ್ಷಾಂತ್ಯಕ್ಕೆ ಇರುವಂತೆ ಸಲ್ಲಿಸುವ ಮಾಹಿತಿಗಳ ಆಧಾರದ ಮೇಲೆ, ಕವಿಪ್ರನಿನಿಯ ಆಡಳಿತ ಕಛೇರಿಗಳು ಮತ್ತು

ವಿಸಕಂಗಳ ಕಂಪನಿ ಕಾರ್ಯಾಲಯಗಳು ಹುದ್ದೆಗಳ ಕ್ರೋಢೀಕೃತ ಮಾಹಿತಿಗಳನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುತ್ತಿರುತ್ತಿವೆ ಮತ್ತು ಕವಿಪ್ರನಿನಿಯು ಅಧಿಸೂಚನೆಯನ್ನು ಜಾರಿಗೊಳಸುತ್ತಿದೆ. ಆದರೆ, ಕವಿಪ್ರನಿನಿ ನಿಗಮ ಕಾರ್ಯಾಲಯವು ನಿರ್ವಹಿಸುತ್ತಿರುವ ಕವಿಪ್ರನಿನಿಯ ಮತ್ತು ವಿಸಕಂ ಗಳ ಸಿಬ್ಬಂದಿಯ ವಿವಿಧ ಮಾಹಿತಿಗಳ ಡೇಟಾ-ಬೇಸ್ ನಲ್ಲಿ ರಾಜ್ಯಾದ್ಯಂತ ಕವಿಪ್ರನಿನಿಯ ಮತ್ತು ವಿಸಕಂ ಗಳ ಸಂಬಂಧಿಸಿದ ಎಲ್ಲಾ ವೇತನ ಬಟವಾಡೆ ಅಧಿಕಾರಿಗಳು ಆರ್ಥಿಕ ವರ್ಷಾಂತ್ಯಕ್ಕೆ ಇರುವಂತೆ ದಾಖಲಿಸುತ್ತಿರುವ ತಮ್ಮ ಕಾರ್ಯವ್ಯಾಪ್ತಿಯ ಕಛೇರಿಗಳಲ್ಲಿ/ಶಾಖೆಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳು ಮತ್ತು ಸಂಖ್ಯೆಗಳು ಬೇರೆಯಾಗುತ್ತಿರುತ್ತದೆ. ಆದ್ದರಿಂದ, ಕವಿಪ್ರನಿನಿಯು ಪ್ರತೀ ಆರ್ಥಿಕ ವರ್ಷಾಂತ್ಯಕ್ಕೆ ಅಧಿಸೂಚನೆಯ ಮೂಲಕ ಪ್ರಕಟಿಸುತ್ತಿರುವ ಕವಿಪ್ರನಿನಿ ಮತ್ತು ವಿಸಕಂಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆಗಳು ಮತ್ತು ಸಿಬ್ಬಂದಿಯ ಡೇಟಾ-ಬೇಸ್‌ನಲ್ಲಿ ಕವಿಪ್ರನಿನಿಯ ಮತ್ತು ವಿಸಕಂ ಗಳ ವೇತನ ಬಟವಾಡೆ ಅಧಿಕಾರಿಗಳು ದಾಖಲಿಸುತ್ತಿರುವ ಹುದ್ದೆಗಳ ಮಾಹಿತಿಗಳು/ಸಂಖ್ಯೆಗಳು ಹೊಂದಾಣಿಕೆಯಾಗುತ್ತಿರುವುದಿಲ್ಲವಾದ್ದರಿಂದ, ಸಿಬ್ಬಂದಿಯ ಡೇಟಾ-ಬೇಸ್ ನಿಂದ ಹುದ್ದೆಗಳ ಮತ್ತು ಸಿಬ್ಬಂದಿಯ ವಿವಿಧ ಮಾಹಿತಿಗಳನ್ನು ಪಡೆದು ಸರ್ಕಾರದ ವಿವಿಧ ಇಲಾಖೆಗಳಿಗೆ, ಆಯೋಗಗಳಿಗೆ, ಸಭೆಗಳಿಗೆ, ವಿಧಾನ ಮಂಡಲದ ಸದಸ್ಯರಿಗೆ ಮತ್ತು ಇತರೆ ಪ್ರಾಧಿಕಾರಗಳಿಗೆ ಸಲ್ಲಿಸುವಾಗ ಕಷ್ಟಕರವಾಗುತ್ತಿರುತ್ತದೆ.

ಆದ್ದರಿಂದ, ನಿಮ್ಮ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಕಛೇರಿಗಳು ಪ್ರತೀ ಆರ್ಥಿಕ ವರ್ಷಾಂತ್ಯಕ್ಕೆ ಇರುವಂತೆ ನಿಮ್ಮ ಕಛೇರಿಗಳಿಗೆ ಸಲ್ಲಿಸುವ ಹುದ್ದೆಗಳ ಮಾಹಿತಿಗಳು/ಅಂಕಿ ಅಂಶಗಳು ಹಾಗೂ ಸಿಬ್ಬಂದಿಯ ಡೇಟಾ-ಬೇಸ್ ನಲ್ಲಿ ವೇತನ ಬಟವಾಡೆ ಅಧಿಕಾರಿಗಳು ದಾಖಲಿಸುವ ಹುದ್ದೆಗಳ ಮಾಹಿತಿಗಳು/ಅಂಕಿ ಅಂಶಗಳು ಒಂದೇ ಆಗಿರುವಂತೆ ಮತ್ತು ಹೊಂದಾಣಿಕೆಯಾಗುವಂತೆ, ನಿಮ್ಮ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಕಛೇರಿಗಳು ಮತ್ತು ಎಲ್ಲಾ ವೇತನ ಬಟವಾಡೆ ಅಧಿಕಾರಿಗಳು ನಿಗಾ ವಹಿಸುವಂತೆ ಸೂಕ್ತ ಸೂಚನೆಗಳನ್ನು ನೀಡಲು ಕೋರಿದೆ.

ನಿಮ್ಮ ವಿಶ್ವಾಸಿ,

ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ),
ಕವಿಪ್ರನಿನಿ.

ಪ್ರತಿಯನ್ನು ಮಾಹಿತಿಗಾಗಿ:

ವ್ಯವಸ್ಥಾಪಕರು(ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ, ಕವಿಪ್ರನಿನಿ ರವರು ಮೇಲಿನ ಸೂಚನೆಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

06

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ: ಕವಿಪ್ರನಿನಿ/ಬಿ೨ಎ/18261/2015-16** **ದಿನಾಂಕ:** 01 JUN 2021

**ಅತೀ ತುರ್ತು**

..........ರಂದು ರವಾನೆಯಾಗಿದೆ

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾ.ಸಂ.),
ಬೆವಿಸಕಂ/ಮವಿಸಕಂ/ಹುವಿ.ಸ.ಕಂ./ಗುವಿಸಕಂ/ಚಾ.ವಿ.ಸ.ನಿ.ನಿ.,
ಬೆಂಗಳೂರು/ಮಂಗಳೂರು/ಹುಬ್ಬಳ್ಳಿ/ಕಲಬುರಗಿ/ಮೈಸೂರು.

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ, ಕವಿಪ್ರನಿನಿ,
ಬೆಂಗಳೂರು/ಮೈಸೂರು/ತುಮಕೂರು/ಹಾಸನ/ಬಾಗಲಕೋಟೆ/ಕಲಬುರಗಿ.

ಮುಖ್ಯ ಇಂಜಿನಿಯರ್(ವಿ),
ಎಸ್.ಎಲ್.ಡಿ.ಸಿ., ಕವಿಪ್ರನಿನಿ,
ಬೆಂಗಳೂರು.

ಆರ್ಥಿಕ ಸಲಹೆಗಾರರು(ಲೆಕ್ಕಗಳು ಮತ್ತು ಸಂಪನ್ಮೂಲ),
ಕವಿಪ್ರನಿನಿ, ಕಾವೇರಿ ಭವನ,
ಬೆಂಗಳೂರು.

ಮಾನ್ಯರೆ,

**ವಿಷಯ:** ಕವಿಪ್ರನಿನಿ ಮತ್ತು ವಿ.ಸ.ಕಂ.ಗಳಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳ ಬಗ್ಗೆ.

**ಉಲ್ಲೇಖ:**
1. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ೨ಎ/18261/2015-16 ದಿನಾಂಕ: 21.09.2020.
2. ನಿಗಮದ ಪತ್ರ ಸಮ ಸಂಖ್ಯೆ ದಿನಾಂಕ: 23.03.2021.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತೀ ವರ್ಷದಂತೆ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ **ದಿನಾಂಕ: 31.03.2021 ರವರೆಗೆ** ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಕವಿಪ್ರನಿನಿಯು ತುರ್ತಾಗಿ ಪ್ರಕಟಿಸಬೇಕಿದ್ದು, ಪ್ರತೀ ವರ್ಷವೂ ನಿಮ್ಮ ಕಛೇರಿಯು ಸಲ್ಲಿಸುತ್ತಿರುವಂತೆ ನಿಮ್ಮ ವಿದ್ಯುತ್ ಸರಬರಾಜು ಕಂಪನಿಯ/ಕವಿಪ್ರನಿನಿ ಪ್ರಸರಣ ವಲಯದ/ನಿಮ್ಮ ಕಾರ್ಯವ್ಯಾಪ್ತಿಯ ಕಛೇರಿಗಳಲ್ಲಿ **ದಿನಾಂಕ:31.03.2021 ರವರೆಗೆ** ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿಯಿರುವ ಹುದ್ದೆಗಳ ವಿವರಗಳನ್ನು ಈವರೆವಿಗೂ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಆದ್ದರಿಂದ, ಉಲ್ಲೇಖದ ನಿಗಮದ ಅಧಿಸೂಚನೆಯ ನಮೂನೆಯಲ್ಲಿ (ಕವಿಪ್ರನಿನಿಯ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆ) ತಕ್ಷಣವೇ ಮಾಹಿತಿಗಳನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಕೋರಿದೆ.

ನಿಮ್ಮ ವಿಶ್ವಾಸಿ,

**ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ)**
ಕ.ವಿ.ಪ್ರ.ನಿ.ನಿ.

**ಪ್ರತಿಯನ್ನು ಮಾಹಿತಿಗಾಗಿ:**

ವ್ಯವಸ್ಥಾಪಕರು(ಆಂತರಿಕ ನಿರ್ವಹಣೆ), ನಿಗಮ ಕಾರ್ಯಾಲಯ, ಕವಿಪ್ರನಿನಿ ರವರು ಮೇಲಿನ ಸೂಚನೆಗಳಂತೆ ಮಾಹಿತಿಗಳನ್ನು ಸಂಗ್ರಹಿಸಲು ಸೂಚಿಸಿದೆ.